

## ಅಲಿಯಾ ಲೆಕ್ಕಾಚಾರ

ತಾರೆಯರ ಸಂಭಾವನೆ ವಿಷಯದಲ್ಲಿ ಹಾಲಿವುಡ್‌ನಲ್ಲಿ ನಡೆದ ಚರ್ಚೆ ಬಾಲಿವುಡ್‌ನಲ್ಲೂ ಮುಂದುವರಿದಿದೆ. ಎಲ್ಲ ಕಡೆಯೂ ಹೀರೋಯಿನ್‌ಗಳಿಗೆ ಸಂಭಾವನೆ ಕಡಿಮೆ ಕೊಟ್ಟು ತಾರತಮ್ಯ ಎಸಗುತ್ತಾರೆ ಎನ್ನುವ ಆರೋಪ. ಈ ವಿಷಯದಲ್ಲಿ ಹಿಂದೆ ಸ್ವರ ಭಾಸ್ಕರ್, ಪ್ರಿಯಾಂಕಾ ಚೋಪ್ರಾ ಮುಂತಾದವರೆಲ್ಲ ಬೇಸರದಿಂದ ಮಾತನಾಡಿದ್ದರು. ಆದರೆ ಅಲಿಯಾ ಭಟ್ ಈ ವಿಷಯದಲ್ಲಿ ಭಿನ್ನ ನಿಲುವು ತಳೆದಿದ್ದಾಳೆ. ಆಕೆಯ ಪ್ರಕಾರ, ಹೀರೋ ಅಥವಾ ಹೀರೋಯಿನ್ ಯಾರೇ ಆದರೂ ಹೆಚ್ಚು ಪ್ರೇಕ್ಷಕರನ್ನು ಸೆಳೆಯುವ ಸಾಮರ್ಥ್ಯ ಇದ್ದರೆ ಅವರಿಗೆ ಹೆಚ್ಚು ಸಂಭಾವನೆ ಕೊಡುವುದು ಸರಿಯಾದ ಕ್ರಮ. 'ವರುಣ್ ಧವನ್‌ನನ್ನೇ ಉದಾಹರಣೆಗೆ ತೆಗೆದುಕೊಳ್ಳಿ. ಆತನ ಸಿನಿಮಾ ಎಂದರೆ ಥಿಯೇಟರ್‌ಗೆ ದೊಡ್ಡ ಸಂಖ್ಯೆಯಲ್ಲಿ ಪ್ರೇಕ್ಷಕರು ಬರುತ್ತಾರೆ. ಆದರೆ ನಾನು ನಟಿಸಿದ ಚಿತ್ರ ಎಂದರೆ ಅದಕ್ಕಿಂತ ಕಡಿಮೆ ಜನ ಬರುತ್ತಾರೆ. ಹಾಗಾಗಿ ಸಂಭಾವನೆಯಲ್ಲಿ ಹೆಚ್ಚು– ಕಡಿಮೆ ಮಾಡುವುದು ಸಹಜ' ಎನ್ನುವುದು ಅಲಿಯಾಳ ವಾದ. ಅಂದ ಹಾಗೆ ಅಲಿಯಾ ನಾಯಕಿ ಆಗಿದ್ದ 'ರಾಝಿ' ಚಿತ್ರ ಅದ್ಭುತ ಯಶಸ್ಸು ಕಂಡರೂ ಅಲಿಯಾ ತನ್ನ ಸಂಭಾವನೆಯನ್ನು ಏರಿಸಿಲ್ಲವಂತೆ. 'ನನಗೆ ಸಂಭಾವನೆ ಮುಖ್ಯವಲ್ಲ, ಆ ಚಿತ್ರ, ಚಿತ್ರಕಥೆಯ ಜತೆಗಿನ ಭಾವುಕ ಸಂಬಂಧ ಮುಖ್ಯ. ಸಂಭಾವನೆ ಕಡಿಮೆ ಎನ್ನುವ ಕಾರಣಕ್ಕೆ ನಾನು ಸಿನಿಮಾಗಳನ್ನು ನಿರಾಕರಿಸುವುದಿಲ್ಲ' ಎನ್ನುತ್ತಾಳೆ ಅಲಿಯಾ.





## ಜಾಹ್ನವಿ ಬರುತ್ತಿದ್ದಾಳೆ

ಶ್ರೀದೇವಿಯ ಮಗಳು ಜಾಹ್ನವಿ ಕಪೂರ್, ನಿರ್ಮಾಪಕ ಕರಣ್ ಜೋಹರ್‌ನ 'ಧಡಕ್' ಚಿತ್ರದಲ್ಲಿ ಬೆಳ್ಳಿತೆರೆಗೆ ಪ್ರವೇಶ ಮಾಡುತ್ತಿರುವುದು ಎಲ್ಲರಿಗೆ ತಿಳಿದ ಸಂಗತಿ. ಆಕೆಯ ಎದುರು ಹೀರೋ ಆಗಿ ನಟಿಸುತ್ತಿರುವವನು ಶಾಹಿದ್ ಕಪೂರ್‌ನ ಸೋದರ ಇಶಾನ್ ಖಟ್ಟರ್.

'ಕರಣ್ ಜೋಹರ್ ಸ್ವಜನ ಪಕ್ಷಪಾತ ಮಾಡುತ್ತಾನೆ, ಸಿನಿಮಾ ಕುಟುಂಬದವರಿಗೆ ಮಾತ್ರ ಅವಕಾಶ ನೀಡುತ್ತಾನೆ' ಎನ್ನುವ ಕಂಗನಾ ರನೌತ್‌ಳ ಆರೋಪಕ್ಕೆ ಈ ಹೊಸ ಚಿತ್ರವೂ ಪುಷ್ಟಿ ನೀಡುತ್ತಿದೆ. ಹಿಂದಿನಿಂದಲೂ ಕರಣ್ ಜೋಹರ್ ಹಲವು ತಾರಾ ಪುತ್ರರನ್ನು ಮತ್ತು ಪುತ್ರಿಯರನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಲೇ ಇದ್ದಾನೆ. ವರುಣ್ ಧವನ್‌ನಿಂದ ಅಲಿಯಾ ಭಟ್‌ವರೆಗೆ ಇದಕ್ಕೆ ಹತ್ತಾರು ಉದಾಹರಣೆಗಳಿವೆ. ಈಗ ಜಾಹ್ನವಿಯನ್ನು ಪ್ರಮೋಟ್ ಮಾಡುವ ಮೂಲಕ ಮತ್ತೆ ಆರೋಪ ಸಾಬೀತಾಗಿದೆ.

■ ಬಿಂದು